First Grade College for Davanagere.

Q.—527. Srimathi Bellary SIDDAMMA (Davanagere).—

Will the Government be pleased to state :—

(*a*) the reason for the delay in granting a First Grade College to Davanagere though the request has been there for a long time ;

(*b*) whether great inconvenience caused thereby to the poor students has come to their notice ?

A.—Sri A. G. RAMACHANDRA RAO (Minister for Law and Education).—

(*a*) The question of upgrading the Intermediate College at Davanagere is under active consideration of the University.

(*b*) It is a matter of opinion.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈ ಪ್ರಶ್ನೆ ವಿಶ್ವ ವಿದ್ಯಾನಿಲಯದವರ ತೀವ್ರ ಪರ್ಯಾಲೋಚನೆಯಲ್ಲಿದೆ ಎಂದು ಅಪ್ಪಣೆ ಕೊಡಿಸಿದ್ದೀರಿ. ಎಷ್ಟು ದಿವಸಗಳಿಂದ ಇದು ಪರ್ಯಾಲೋಚನೆಯಲ್ಲಿದೆ ?

* ಶ್ರೀ ಎ. ಜಿ. ರಾಮಚಂದ್ರರಾವ್.—ಈಗಾಗಲೇ ಒಂದು ವರ್ಷಕ್ಕೆ ಮೇಲ್ಪಟ್ಟು ಈ ಪ್ರಶ್ನೆ ಬರುತ್ತಿದೆ. ಆಗಿನಿಂದಲೂ ಪರ್ಯಾಲೋಚನೆಯಲ್ಲಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇದು ಇನ್ನೆಷ್ಟು ದಿವಸಗಳಿಗೆ ತೀರ್ಮಾನವಾಗಬಹುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾನು ಇಂಗ್ಲಿಷಿನಲ್ಲಿ ಹೇಳಿದೆ. ಪ್ರಾಯಶಃ ಕನ್ನಡದಲ್ಲಿ ಹೇಳಿದ್ದರೆ ಅವರಿಗೆ ಅರ್ಥವಾಗುತ್ತಿತ್ತು ಎಂದು ತಿಳಿಯುತ್ತದೆ. ವಿಶ್ವವಿದ್ಯಾನಿಲಯದಿಂದ ನಮಗೆ ಏನೂ ಬಂದಿಲ್ಲ. ಯೂನಿವರ್ಸಿಟಿ ಕೌನ್ಸಿಲ್‌ನವರು ವಿಶ್ವ ವಿದ್ಯಾನಿಲಯಗಳಿಗೆ ಸಂಬಂಧಪಟ್ಟ ತಿದ್ದುಪಡಿ ಮಸೂದೆ ಏನಿದೆ ಅದು ಕಾನೂನು ಆಗುವವರೆಗೂ ಹಾಗೆಯೇ ಇಟ್ಟುಕೊಂಡಿರಬಹುದು ಎಂದು ನಮಗೆ ಸಮಾಚಾರ ತಿಳಿದುಬಂದಿದೆ.

Electrification of Nagar village in Hosanagar Taluk.

Q.—20. Sri B. MADHAVACHAR (Bhadravati).—

Will the Government be pleased to state:—

(*a*) whether it is a fact that an estimate for electrification of Nagar village in Hosanagar taluk has been prepared ;

(*b*) whether the said estimete has been sanctioned ?

A.—Sri H. M. CHANNABASAPPA (Minister for Industries).—

(*a*) Yes.

(*b*) No.

ಶ್ರೀ ಬಿ. ಮಾಧವಾಚಾರ್.—ಈ ಅಂದಾಜನ್ನು ಮೂಜೂರು ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮಗೆ ಉತ್ತರ ಕೊಟ್ಟ ದಿನ ಅದು ಮಂಜೂರಾಗಿರಲಲ್ಲ. 8ನೇ ಮಾರ್ಚ್ 1955ರಲ್ಲಿ ಅಂದರೆ ಒಂದು ವಾರದ ಕೆಳಗೆ ಮಂಜೂರಾಗಿದೆ.

Electric Power (supply to I. P. sets in Devaramarikunte, Challakere Taluk.

Q.—318. Sri V. MASIYAPPA (Hiriyur).—

Will the Government be pleased to state:—

(*a*) how many people of Devaramarikunte in Challakere taluk have deposited money for supply of electricity for I.P. sets.

(*b*) when they deposited the money ;

(*c*) if any estimate has been prepared ; if it is sanctioned ?

A—Sri H. M. CHANNABASAPPA (Minister for Industries).—

(*a*) Four.

(*b*) October 1953.

(*c*) Estimate has been prepared but not sanctioned.

ಶ್ರೀ ವಿ. ಮಸಿಯಪ್ಪ.—ಅಂದಾಜಾದ ಮೊತ್ತ ಎಷ್ಟೆಂಬುದನ್ನು ತಿಳಿಸುತ್ತೀರಾ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—38,400 ರೂಪಾಯಿಗಳು.

ಶ್ರೀ ವಿ. ಮಸಿಯಪ್ಪ.—ಹಾರ್ಸ್ ಪವರ್ ಎಷ್ಟು ?

ಶ್ರೀ ಎಚ್. ಎಂ. ಚನ್ನಬಸಪ್ಪ.—30.

ಶ್ರೀ ವಿ. ಮಸಿಯಪ್ಪ.—(ಎ) ಭಾಗಕ್ಕೆ ಉತ್ತರವಾಗಿ ನಾಲ್ಕು ಜನ ಎಂದು ಹೇಳಿದ್ದೀರಿ. ಆ ಊರಲ್ಲಿ ಐದು ಜನರು ಹೆಸರು ಕೊಟ್ಟಿದ್ದಾರೆ. ಐದು ಜನಗಳಿಂದ 35-36 H.P.ಗೆ ಡಿಮ್ಯಾಂಡ್ ಇದೆಯಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲು 12 ಜನ ಬರೀ ಅರ್ಜಿ ಕೊಟ್ಟರು ; ಹಣವನ್ನು ಡಿಪಾಜಿಟ್ ಮಾಡಲಲ್ಲ. ಹಣ ಡಿಪಾಜಿಟ್ ಮಾಡಿ ಎಂದು ನೋಟೀನು ಕೊಟ್ಟ ಮೇಲೆ ನಾಲ್ಕು ಜನರು ಡಿಪಾಜಿಟ್ ಮಾಡಿದರು. ಅದಕ್ಕೆ ಅಂದಾಜು ತಯಾರಾಯಿತು. ಅದರ ಪ್ರಕಾರ 30 H.P.ಗೆ 38,400 ರೂಪಾಯಿಗಳ ಅಂದಾಜು ಆಯಿತು. ಒಂದು H.P.ಗೆ ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿ work out ಆಗುತ್ತದೆ. ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಆಗುವುದರಿಂದ ಡಿಪಾಜಿಟ್ ಮಾಡಿದರೆ ಏರ್ಪಾಡು ಮಾಡುತ್ತೇವೆ.